(vi) ಮಂಕ್ಸಂಬ ಗ್ರಾಮದ ಮಾಧ್ಯಮಿಕ ಶಾಲೆಯ ಉಪಾಧ್ಯಾಯರಂ ವಿದ್ಯಾರ್ಥಿ ನಿಯರನ್ನು ನಿಪ್ಪಾಣಿಗೆ ಕರೆದುಕೊಂಡು ಹೋಗಿರುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಚಿಕ್ಕೋಡಿ ತಾಲ್ಲೂಕಿನ ಮಂಕ್ಸಂಬ ಗ್ರಾಮದ ಮಾಧ್ಯಮಿಕ ಶಾಲೆಯಂ ಇಬ್ಬರು ಶಿಕ್ಷಕರು ತಾರೀಖು ೨೬-೧-೧೯೮೬ರಂದು (ಗಣರಾಜ್ಯೋತ್ಸವ ದಿನದಂದು) ಶಾಲೆಯಲ್ಲಿಯ ಇಬ್ಬರು ವಿದ್ಯಾರ್ಥಿನಿಯರನ್ನು ನಿಪ್ಪಾಣಿಗೆ ಕರೆದುಕೊಂಡು ಹೋಗಿದ್ದಾರೆಂದಂ ತಿಳಿದುಬಂದಿರುತ್ತದೆ.

ಗ್ರಾಮದ ಜನರಿಂದ ಈ ಮಾಧ್ಯಮಿಕ ಶಾಲೆಯನ್ನು ೩೦-೧-೧೯೮೬ರಿಂದ ಬಹಿಷ್ಕರಿಸಲಾಗಿದ್ದು ಪೋಲೀಸರಿಂದ ಕಾವಲಿಗೆ ಒಳಪಡಿಸಲಾಗಿದೆ. ಈ ದಿಸೆಯಲ್ಲಿ ಶಿಕ್ಷಣ ಇಲಾಖೆಯಿಂದ ಹಾಗೂ ಗೃಹ ಇಲಾಖೆಯಿಂದ ತ್ವರಿತ ಕ್ರಮ ಕೈಕೊಂಡು ಆದ ಘಟನೆಯ ಬಗ್ಗೆ ವಿವರವಾದಂತಹ ಹೇಳಿಕೆಯನ್ನು ಸದನದಲ್ಲಿ ಬಯಸುತ್ತೇನೆ.

ತಪ್ಪಿಸ್ಥ ಶಿಕ್ಷಕರನ್ನು ಕೆಲಸದಿಂದ ವಜಾ ಮಾಡುವಂತೆ ಗ್ರಾಮಸ್ಥರು ಒತ್ತಾಯಿಸಿದ್ದು ವಜಾ ಮಾಡದೆ ಹೋದಲ್ಲಿ ಶಾಲೆಯನ್ನು ಮುಚ್ಚುವಂತೆ ಕೋರಿರುತ್ತಾರೆ.

ಶ್ರೀ ಬಿ. ರಾಚಯ್ಯ.—ವಿವರಣೆಯನ್ನು ತರಿಸಿ ಹೇಳಿಕೆಯನ್ನು ಕೊಡುತ್ತೇನೆ.

ಮಂತ್ರಿಯವರಿಂದ ಹೇಳಿಕೆ

(i) ಹಿರಿಯೂರಿನಲ್ಲಿ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ಪೋಲೀಸರು ಭಾಗವಹಿಸದಿರುವುದು

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹಸಚಿವರು).—ನಿಯಮ ೩೫ರ ಪ್ರಕಾರ ವಿಧಾನಸಭಾ ಸದಸ್ಯರಾದ ಶ್ರೀ ಆರ್. ರಾಮಯ್ಯನವರು ಕೊಟ್ಟಿರುವ ಸೂಚನೆಗೆ ಈ ಕೆಳಕಂಡ ಹೇಳಿಕೆಯನ್ನು ಮಾಡಲಿಚ್ಛಿಸುತ್ತೇನೆ.

ಹಿರಿಯೂರು ನಗರದಲ್ಲಿ ನಡೆದ ಗಣರಾಜ್ಯೋತ್ಸವ ಮತ್ತು ಧ್ವಜಾರೋಹಣದಲ್ಲಿ ಪೋಲೀಸ್ ಇಲಾಖೆಯವರು ಭಾಗವಹಿಸದೆ ಇರುವುದರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿರುತ್ತಾರೆ. ಇದರ ಬಗ್ಗೆ ಚಿತ್ರದುರ್ಗ ಜಿಲ್ಲಾ ಆರಕ್ಷಕ ಉಪಾಧೀಕ್ಷಕರು ತನಿಖೆ ಮಾಡಿ ವರದಿಯನ್ನು ಸಲ್ಲಿಸಿದ್ದಾರೆ. ಅದರ ಪ್ರಕಾರ ಮಾಮೂಲಿನಂತೆ ಹಿರಿಯೂರಿನ ಸರ್ಕಾರಿ ಜೂನಿಯರ್ ಕಾಲೇಜ್ ಆವರಣದಲ್ಲಿ ಗಣರಾಜ್ಯೋತ್ಸವ ನಡೆಸಲು ಯೋಜಿಸಲಾಗಿತ್ತು. ಹಿರಿಯೂರಿನ ಆರಕ್ಷಕ ಉಪ ನಿರೀಕ್ಷಕರು (ಕಾನೂನು ಮತ್ತು ವ್ಯವಸ್ಥೆ) ಆರಕ್ಷಕ ಉಪ ನಿರೀಕ್ಷಕರು (ಅಪರಾಧ) ಇವರು ಇತ್ತೀಚೆಗೆ ಸ್ಥಾಪಿತವಾದ ಜೆ.ಎಂ.ಎಫ್.ಸಿ. ನ್ಯಾಯಾಲಯದ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಲ್ ಬೆಳಿಗ್ಗೆ ೭-೪೫ಕ್ಕೆ ಸಮಯದಲ್ಲಿ ಹೋದರು. ಅದು ಆದನಂತರ ಅವರು ಸರ್ಕಾರಿ ಜೂನಿಯರ್ ಕಾಲೇಜಿನ ಆವರಣಕ್ಕೆ ಧ್ವಜಾರೋಹಣ ಸಮಾರಂಭಕ್ಕೆ ಬಂದರು, ಅವರು ಅಲ್ಲಿ ತಲುಪುವುದಕ್ಕೆ ಮೊದಲು ಧ್ವಜಾರೋಹಣ ಸಮಾರಂಭ ಪೂರ್ಣಗಿರುವುದನ್ನು ನೋಡಿದರು. ತನಿಖೆಯ ಪ್ರಕಾರ ಪ್ರತಿ ವರ್ಷವೂ ಒಬ್ಬ ಪೂರ್ಣ ಆರಕ್ಷಕ ಪೇದೆಗಳನ್ನು ಮತ್ತು ನಾಲ್ಕು ಜನ ಆರಕ್ಷಕ ಪೇದೆಗಳನ್ನು ಧ್ವಜಾರೋಹಣ ಸಮಾರಂಭದಲ್ಲಿ ಪಾಲ್ಗೊಂಡು ಗೌರವ ವಂದನೆ ಸಲ್ಲಿಸುವುದಕ್ಕೆ ಕಳುಹಿಸುವ ಪದ್ಧತ್ತಿಂದು ಕಂಡುಬಂದಿದೆ. ಆದರೆ ಈ ಸಾರಿ ಮೇಲ್ಕಂಡಂತೆ ವ್ಯವಸ್ಥೆ ಮಾಡುವುದು ಸ್ವಲ್ಪ ವಿಳಂತಿ ವಾಯಿತು. ಏಕೆಂದರೆ ಪೊಲೀಸ್ ಠಾಣೆಯ ರೈಟರ್‌ನ ಹತ್ತಿರ ಸಶಸ್ತ್ರ ಕೊಠಡಿಯ ಕೀಗಳಿದ್ದು ಆವರು ಕೀಯನ್ನು ಮನೆಯಲ್ಲಿ ಮರೆತು ಇಟ್ಟಿದ್ದರಿಂದ ನಿಯಮಿತ ಕಾಲದಲ್ಲಿ ರೈಫಲ್‌ಗಳನ್ನು ಕೊಡಲಾಗಲಿಲ್ಲ. ಸಶಸ್ತ್ರ ಕೊಠಡಿಯ ಬೀಗದ ಕೀಯನ್ನು ಠಾಣೆಯ ಪಿ.ಸಿ. ರೈಟರ್‌ಗೆ ಪಹಿಸಿದ್ದು ಮತ್ತು ಆದನ್ನು ಅವನು ಮನೆಯಲ್ಲಿಟ್ಟಿದ್ದು ಕಾನೂನು ಮತ್ತು ವ್ಯವಸ್ಥೆಯ ಆರಕ್ಷಕ ಉಪ ನಿರೀಕ್ಷಕರವರ ಲೋಪವಾಗಿರುತ್ತದೆ, ಇದೇ ತರಹ ಪಿ.ಸಿ. ರೈಟರ್‌ರವರು ಕೀಯನ್ನು ಮನೆಯಲ್ಲಿ ಮರೆತು ಬಂದದ್ದು ಸಹ ಲೋಪವಾಗಿರುತ್ತದೆ. ಆದುದರಿಂದ ಇವರ ಮೇಲೆ ಶಿಸ್ತಿನ ಕ್ರಮವನ್ನು ಪೋಲೀಸ್ (ಡಿ.ಪಿ.) ನಿಯಮಗಳು ೧೯೬೫ರ ಪ್ರಕಾರ ಮೇಲ್ಕಂಡ ಬೇಜವಾಬ್ದಾರಿ ಮತ್ತು ಲೋಪಗಳ ಬಗ್ಗೆ ದಿನಾಂಕ ೨೮-೧-೧೯೮೬ ರಂದು ಕ್ರಮ ಜರುಗಿಸಲಾಗಿದೆ.

ವಿಚಾರಣೆಯ ಪ್ರಕಾರ ಸರ್ಕಾರಿ ಜೂನಿಯರ್ ಕಾಲೇಜಿನ ಆವರಣದಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಬಾರದೆಂಬ ಉದ್ದೇಶ ಪೋಲೀಸ್ ಸಿಬ್ಬಂದಿಯಂವರಿಗೆ ಇರಲಿಲ್ಲವೆಂದು ತಿಳಿದು ಬಂದಿದೆ. ಜೆ.ಎಂ.ಎಫ್.ಸಿ. ನ್ಯಾಯಾಲಯ ಆವರಣದಲ್ಲಿ ಮತ್ತು ಹಿರಿಯೂರು ಪೋಲೀಸ್ ಠಾಣೆಯ ಆವರಣದಲ್ಲಿ ಸಮಾರಂಭಗಳನ್ನು ಮುಗಿಸಿಕೊಂಡು ಸರ್ಕಾರಿ ಜೂನಿಯರ್ ಕಾಲೇಜ್ ಆವರಣದಲ್ಲಿ ನಡೆಯುವ ಸಮಾರಂಭಕ್ಕೆ ನಿಯಮಿತ ಕಾಲಕ್ಕೆ, ಕಾಲದ ಮರಿಚೀಕೆಯಿಂದಾಗಿ ಹೋಗಲು ಸಾಧ್ಯವಾಗಲಿಲ್ಲ. ಹಿರಿಯೂರಿನ ಆರಕ್ಷಕ ಉಪ ನಿರೀಕ್ಷಕರು ಸರಿಯಾದ ಯೋಜನೆಯಂನ್ನು ನಿರೂಪಿಸುವಲ್ಲಿ ವಿಫಲರಾದರಂ. ಇತ್ತೀಚಿನವರೆಗೂ ಹಿರಿಯೂರು ಜೆ.ಎಂ.ಎಫ್.ಸಿ. ನ್ಯಾಯಾಲಯವು ಇಲ್ಲದಿದ್ದು ೧೯೮೫ರಲ್ಲಿ ಇದು ಸ್ಥಾಪನೆಯಾಗಿದೆ. ಸರ್ಕಾರಿ ಕಾಲೇಜು ಆವರಣದಲ್ಲಿ ಆರಕ್ಷಕ ಉಪ ನಿರೀಕ್ಷಕರು ಧ್ವಜಾರೋಹಣಕ್ಕೆ ಬೇಕಾದ ಧ್ವನಿವರ್ಧಕ ಇತ್ಯಾದಿಗಳನ್ನು ಸಂಪ್ರದಾಯದಂತೆ ವ್ಯವಸ್ಥೆ ಮಾಡಿದ್ದರೆಂದು ವರದಿಯಾಗಿದೆ. ಆದರೆ ಮೇಲ್ಕಂಡ ಪರಿಸ್ಥಿತಿಗೆ ದುರಾದೃಷ್ಟವಶಾತ್ ಅವಕಾಶ ಕೊಡಲಾಯಿತಂ.

ಈ ತರಹದ ಘಟನೆಗಳಿಗೆ ಅವಕಾಶ ಕೊಡದಂತೆ ಮತ್ತು ಧ್ವಜಾರೋಹಣ ಸಮಾರಂಭವನ್ನು ನ್ಯಾಯಾಲಯದ ಆವರಣದಲ್ಲಿ ಮತ್ತು ಎಕ್ಸಿಕ್ಯೂಟೀವ್ ಮ್ಯಾಜಿಸ್ಟ್ರೇಟರು ಏರ್ಪಡಿಸಿರುವ ಸಮಾರಂಭಕ್ಕೂ ಕೊನೆಯಪಕ್ಷ ಅರ್ಧಗಂಟೆ ಕಾಲಾವಕಾಶ ಇಟ್ಟುಕೊಳ್ಳುವಂತೆ ಏರ್ಪಾಡು ಮಾಡಿ ಭಾಗವಹಿಸಬಹುದೆಂದು ಸೂಚಿಸಲಾಗಿದೆ.

ಈ ಬಗ್ಗೆ ಹಿರಿಯೂರು ಆರಕ್ಷಕ ಉಪ ನಿರೀಕ್ಷಕರಿಗೆ ಸ್ಥಳೀಯ ತಾಸಿಲ್ದಾರ್‌ರ ಜೊತೆಯಲ್ಲಿ ನಿಕಟ ಸಂಪರ್ಕ ಇಟ್ಟುಕೊಂಡು ಇಂಥ ಎಲ್ಲಾ ರಾಷ್ಟ್ರೀಯ ಹಬ್ಬಗಳಲ್ಲಿ ತಪ್ಪದೇ ಭಾಗವಹಿಸುವಂತೆ ಸೂಚಿಸಲಾಗಿದೆ. ಹಿರಿಯೂರಂ ಆರಕ್ಷಕ ಉಪ ನಿರೀಕ್ಷಕರನ್ನು ಮತ್ತು ಪಿ.ಸಿ. ರೈಟರ್‌ನ್ನು ಸಸ್ಪೆಂಡ್ ಮಾಡಿ ಆದೇಶ ನೀಡಿದ್ದೇನೆ.

ದಿನಾಂಕ ೨೮-೧-೮೬ರಂದು ಸದಸ್ಯ ಬಿ.ಎಚ್. ಯಂಕಾನಾಯ್ಕರವರ ಮೇಲೆ ಹಲ್ಲೆ ಮಾಡಿರುವ, ಶ್ರೀ ಎಸ್. ಬಂಗಾರಪ್ಪ ಹಾಗೂ ಶ್ರೀ ನ್ಯಾಮಂರಾವ್‌ರವರು ಕೊಟ್ಟ ಸೂಚನೆಯ ಬಗ್ಗೆ ಈ ಕೆಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

(ii) ಹರಪನಹಳ್ಳಿಯಲ್ಲಿ ಶ್ರೀ ಬಿ.ಎಚ್. ಯಂಕನಾಯ್ಕರ ಮೇಲೆ ಹಲ್ಲೆ

ದಿನಾಂಕ ೨೬-೧-೮೬ ರಂದು ಬೆಳಿಗ್ಗೆ ಸುಮಾರು ೭ ಗಂಟೆ ಸಮಯದಲ್ಲಿ ಶ್ರೀ ಯಂಕನಾಯಂಕ್‌ರವರು ಪೂಜಾಭಘಟ್ಟ ತಾಂಡದಿಂದ ಹರಪ್ಪನಹಳ್ಳಿಗೆ ಹೋಗುತ್ತಿದ್ದಾಗ ಅವರನ್ನು ಕಮ್ಮತ್ತಹಳ್ಳಿಯ ಮಂರುಳುಸಿದ್ದಯ್ಯ ಮತ್ತು ಆತನ ಮಕ್ಕಳಾದ ಶಾಂತಯ್ಯ, ಗುರುಮೂರ್ತಯ್ಯ ಮತ್ತು ಮತ್ತೊಬ್ಬ ಕೊರಚರ ಮಾರಪ್ಪ ಅವರುಗಳು ಬೈಯ್ದರು. ಮತ್ತು ಅವರ ಕಾಲನ್ನು ಮುರಿಯುವುದಾಗಿ ಬೆದರಿಕೆ ಹಾಕಿದರು. ಇದರ ಬಗ್ಗೆ ಶ್ರೀ ಯಂಕನಾಯಕ್‌ರವರ ದೂರಿನ ಮೇಲೆ ಅದೇ ದಿನ ಆರಸೀಕೆರೆ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ ೭:೮೬ ಕಲಂ ೫೪೧,೫೦೪, ೫೦೬ ಭಾರತ ದಂಡ ಸಂಹಿತೆ ಪ್ರಕಾರ ಗನ್ನೆಯೊಂದನ್ನು ಸೊಂದಾಯಿಸಲಾಯಿತು. ಎಲ್ಲಾ ಆಪರಾಧಿಗಳನ್ನು ದಸ್ತಗಿರಿ ಮಾಡಿ ದಿನಾಂಕ ೨೭-೧-೮೬ ರಂದು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ನ್ಯಾಯಾಲಯವು ಅವರುಗಳನ್ನು ಜಾಮೀನಿನ ಮೇಲೆ ಅದೇ ದಿನ ಬಿಡುಗಡೆ ಮಾಡಿತು. ದಿನಾಂಕ ೨೪-೧-೮೬ ರಂದು ಶ್ರೀ ಯಂಕನಾಯಕ್‌ರವರ ದೂರಿನ ಮೇಲೆ ಕಲಂ ೧೦೭ ಸಿ, ಆರ್. ಪಿ. ಸಿ, ಪ್ರಕಾರ ಮೇಲಂಡ ಅಪರಾಧಿಗಳ ಮೇಲೆ ನಡವಳಿಗಳನ್ನು ಜಾರಿ ಮಾಡಲಾಯಿತು. ಶ್ರೀ. ಯಂಕನಾಯಕ್‌ರವರಿಗೆ ಪೋಲೀಸ್ ರಕ್ಷಣೆ ಕೊಡುವುದಕ್ಕೆ ಸೂಚಿಸಲಾಯಿತಂ, ಆದರೆ ಅವರು ನಿರಾಕರಿಸಿದರು. ಶ್ರೀಯಂಕನಾಯಂಕ್ ಮತ್ತು ಮಂರುಳುಸಿದ್ದಯ್ಯನವರ ಮಧ್ಯೆ ಹಣದ ವ್ಯವಹಾರಗಳಲ್ಲಿ ವೈಮನಸ್ಯವಿತ್ತೆಂದು ಪರದೆಯಾಗಿದೆ. ಹರಪ್ಪನಹಳ್ಳಿ ಜೆ. ಎಂ. ಎಫ್. ಸಿ. ನ್ಯಾಯಾಲಯದಲ್ಲಿ ಶ್ರೀ. ಯಂಕನಾಯಕ್‌ರವರ ವಿರುದ್ಧ ಎದುರು ಮೊಕದ್ದಮೆಯಂನ್ನು ಹೂಡಲಾಗಿದೆ ಎಂದು ತಿಳಿದು ಬಂದಿದೆ. ಆವಶ್ಯಕತೆ ಇದ್ದಲ್ಲಿ ಸದಸ್ಯರಿಗೆ ರಕ್ಷಣೆ ಕೊಡಲು ವ್ಯವಸ್ಥೆ ಮಾಡಲಾಗಂವುದು.